**<u>ಸಾಕ್ಷಿಯನ್ನು ದಿಃ 23.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ಶ್ರೀ ಹೆಚ್ ವಿ ವಿ ವಕೀಲರಿಂದಃ–</u>**

ನಾನು ಬಿ ಕಾಂ ಪದವೀಧರೆ. ನನ್ನ ಹುಟ್ಟಿದ ದಿನಾಂಕ ತೋರಿಸುವಂತಹ ಶಾಲಾ ದಾಖಲಾತಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಅದೇ ರೀತಿ ನನ್ನ ಬಳಿ ಆಧಾರ್ ಕಾರ್ಡ್ ಕೂಡ ಇದ್ದು ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

ದಾವಾ ಆಸ್ತಿ ಮೂಲತಃ ನನ್ನ ತಾತನಿಗೆ ಸೇರಿದ್ದು, ಅವರಿಗೆ ಅವರ ತಂದೆಯಿಂದ ಬಂದಿರುತ್ತದೆ. ಆ ಬಗ್ಗೆ ದಾಖಲಾತಿಗಳನ್ನು ಈಗಾಗಲೇ ನ್ಯಾಯಾಲಯುಕ್ಕೆ ಕೊಟ್ಟಿರುತ್ತೇನೆ. ನಾನು ಆರ್.ಡಿ.ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಅಂತಹ ಆರ್ ಡಿ ವಂಶವೃಕ್ಷವನ್ನು ಹಾಜರುಪಡಿಸಿಲ್ಲ, ಅಲ್ಲದೇ ನಾನು ಕುಳ್ಳನಾಯ್ಕು ಮತ್ತು ಜವರನಾಯ್ಕುರವರ ವಂಶಕ್ಕೆ ಸೇರಿದವಳಲ್ಲ ಎಂದರೆ ಸರಿಯಲ್ಲ.

ಜವರನಾಯಕರವರಿಗೆ ನನ್ನನ್ನು ಸೇರಿಸಿ 4 ಜನ ಮಕ್ಕಳು. ಅವರಲ್ಲಿ ಸಿದ್ದರಾಜು ಎಂಬುವವರು ತೀರಿಹೋಗಿರುತ್ತಾರೆ. ಅವರು ತೀರಿಕೊಂಡು ಎಷ್ಟು ವರ್ಷಗಳಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಜವರನಾಯಕರವರ ಮಗಳು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜವರನಾಯಕರವರಿಗೆ 4 ನೇ ಪ್ರತಿವಾದಿ ನೀಲಮ್ಮ ಮಾತ್ರ ಹೆಂಡತಿ ಎಂದರೆ ಸರಿಯಲ್ಲ, ಇನ್ನೊಬ್ಬ ಹೆಂಡತಿ ಗೌರಮ್ಮ ಕೂಡ ಇದ್ದಾರೆ ಎಂದು ನುಡಿಯುತ್ತಾರೆ. ಸದರಿ ಜವರನಾಯಕರವರಿಗೆ 5 ಮತ್ತು 6 ನೇ ಪ್ರತಿವಾದಿಗಳು ಮಾತ್ರ ಮಕ್ಕಳು ಎಂದರೆ ಸರಿಯಲ್ಲ. ಗೌರಮ್ಮ ಎಂಬುವವರು ಜವರನಾಯಕರವರ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಲಿಖಿತ ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯಲ್ಲಿ "7 ನೇ ಪ್ರತಿವಾದಿಗಳ ಮೂಲಕ ಕಾನೂನು ಬಾಹೀರವಾಗಿ ಪಡೆದಿರುವ ವಿಚಾರ ನಮಗೆ ಮನವರಿಕೆ ಆಗಿದ್ದು, ಭವಿಷ್ಯದಲ್ಲಿ ದಾವಾ ಸ್ವತ್ತನ್ನು ನಮಗೆ ಭಾಗಾಂಶ ಕೊಡಬೇಕಾಗುತ್ತದೆ ಎಂಬ ದುರುದ್ದೇಶದಿಂದ 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ " ಎಂಬ ವಿಚಾರವನ್ನು ನಾನೇ ಬರೆಸಿರುತ್ತೇನೆ. ದಾವಾ ಸ್ವತ್ತನ್ನು ಮೊದಲು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು

ನಂತರ 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂಬ ಬಗ್ಗೆ ಹೇಳಿದ್ದು ಅಂತಹ ಕ್ರಯ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ಕ್ರಯ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಈಗಲೂ ಜಮೀನಾಗಿಯೇ ಇರುತ್ತದೆ ನಿವೇಶನಗಳಾಗಿ ಭೂ ಪರಿವರ್ತನೆ ಆಗಿಲ್ಲ. ಸದರಿ ಜಮೀನು ಅನ್ಯಕ್ರಾಂತ ಆಗಿ ಭೂ ಪರಿವರ್ತನೆ ಆಗಿದ್ದು ಮನುಗನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ-19 ಆರ್ ಟಿ ಸಿ ಯಲ್ಲಿ ನಿವೇಶನಗಳಾಗಿ ಪರಿವರ್ತನೆ ಆಗಿದೆ ಎಂದು ಷರಾ ಇದೆ ಎಂದರೆ ಸರಿ. ನಾನೇ ಹಾಜರುಪಡಿಸಿರುವ ನಿಪಿ-20 ಮ್ಯೂಟೇಷನ್ ರಿಜಿಸ್ಟರ್ ಪ್ರತಿಯಲ್ಲಿ ಭೂ ಪರಿವರ್ತನೆ ಆಗಿದೆ ಎಂದು ಒಕ್ಕಣೆ ಇದೆ ಎಂದರೆ ಸರಿ. ಜಮೀನು ಭೂ ಪರಿವರ್ತನೆ ಆಗಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ಅಂತಹ ದಾಖಲೆಗಳನ್ನು ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಸ್ವತ್ತು ಜಮೀನಿನಾಗಿ ಉಳಿಯದೇ ಇರುವ ಕಾರಣ ಅದರಲ್ಲಿ ಭಾಗ ಕೋರಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

7 ನೇ ಪ್ರತಿವಾದಿಗೆ 1, 2, 4 ರಿಂದ 6 ರವರು ಸೇರಿ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ದಾವಾ ಸ್ವತ್ತನ್ನು ಕುಳ್ಳನಾಯಕರವರೂ ಕೂಡ ಮಾರಾಟ ಮಾಡಿದ್ದಾರೆಂದು ವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ವಾದ ಪತ್ರದಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಪತಿ ದಿವಂಗತ ಕುಳ್ಳನಾಯಕರವರಿಂದ ಕಾನೂನು ಬಾಹೀರವಾಗಿ 7 ನೇ ಪ್ರತಿವಾದಿ ಖರೀದಿ ಪಡೆದಿರುತ್ತಾರೆಂದು ಬರೆಸಿದ್ದೇನೆ ಎಂದರೆ ಸರಿ. 7 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಾವಾ ಸ್ವತ್ತನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡುವ ಪೂರ್ವದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ತುಂಬಾ ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಹಾಗಾಗೀ ಕ್ರಯ ಪತ್ರದಲ್ಲಿ ಮುಬೈ ಸಾಲ (ಕೈ ಸಾಲ) ತೀರಿಸುವ ಸಲುವಾಗಿ, ಮನೆಯ ಖರ್ಚಿಗಾಗಿ ಹಾಗೂ ಸಾಲ ತಿರುವಳಿಗಾಗಿ ಮಾರಾಟ ಮಾಡುತ್ತಿರುವರೆಂಬ

ಬಗ್ಗೆ ವಿಚಾರ ಬರೆಸಿದೆ ಎಂದರೆ ಸರಿ. 2013 ನೇ ಸಾಲಿನಲ್ಲಿ ದಾವಾ ಸ್ವತ್ತನ್ನು ರೂ.1,73,000/- ಗಳಿಗೆ 7 ನೇ ಪ್ರತಿವಾದಿ ಖರೀದಿ ಮಾಡಿದ್ದರು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.